# ಗೆಲುವಿನ ಅಹಂ

■ ಮಾದ್ರೆ ರವೀಂದ್ರ

**ಕುಂ**ತಲ ಸಾಮ್ರಾಜ್ಯವನ್ನು ಧ್ರುವಸೇನನೆಂಬ ರಾಜ ಆಳುತ್ತಿದ್ದನು. ಶೂರನಾಗಿದ್ದ ಧ್ರುವಸೇನನು ಸುತ್ತಮುತ್ತ ಆಳುತ್ತಿದ್ದ ರಾಜರುಗಳನ್ನೆಲ್ಲಾ ಸೋಲಿಸಿ ರಾಜ್ಯವನ್ನು ವಿಸ್ತರಿಸಿದ್ದನು. ಅವನ ಶಕ್ತಿ, ಸಾಮರ್ಥ್ಯಕ್ಕೆ ಹೆದರಿ ಅವರು ಕಪ್ಪಕಾಣಿಕೆಗಳನ್ನು ನಿಗದಿತ ಸಮಯಕ್ಕೆ ತಲುಪಿಸಿ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರು.

ಒಂದು ದಿನ ರಾಜನ ಆಸ್ಥಾನದಲ್ಲಿ ಸಭೆ ನಡೆಯುತ್ತಿತ್ತು. ಸಭೆಯ ನಡುವೆ ಧ್ರುವಸೇನನು ನಮ್ಮ ಸೈನ್ಯ ನಮ್ಮ ಶಕ್ತಿಯನ್ನು ಎದುರಿಸುವ ಶತ್ರುಗಳು ಯಾರೂ ಇಲ್ಲ ಅಲ್ಲವೆ? ಎಂದನು.

ಮಂತ್ರಿಗಳು ಮಹಾರಾಜರೇ, ನಿಮ್ಮ ಪ್ರತಾಪಕ್ಕೆ ಸರಿಸಾಟಿ ಯಾರಿದ್ದಾರೆ? ಕುಂತಲ ರಾಜ್ಯಕ್ಕೆ ಎದುರು ನಿಲ್ಲುವವರಾರು? ಎಂದು ರಾಜನನ್ನು ಹೊಗಳಿದರು. ಹೊಗಳು ಭಟರೆನಿಸಿಕೊಂಡಿದ್ದ ಅನೇಕರು ಮಹಾರಾಜರಿಗೆ ಬಹುಪರಾಕ್... ಬಹುಪರಾಕ್... ಎಂದು ಉದ್ಗಾರ ಮೊಳಗಿಸಿದರು.

ಇದು ಕಿರಿಯ ಮಂತ್ರಿ ರಾಮಚಂದ್ರನಿಗೆ ಸರಿ ಕಾಣಲಿಲ್ಲ.

ಮಹಾರಾಜರು ಮನ್ನಿಸಬೇಕು. ಉದಯಗಿರಿ ರಾಜ್ಯದ ರಾಜ ರುದ್ರದೇವನು ಸೈನ್ಯವನ್ನು ಒಗ್ಗೂಡಿಸಿ ಪ್ರಬಲನಾಗುತ್ತಿದ್ದಾನೆ ಎಂದು ಕೇಳಿದ್ದೇನೆ. ಇಲ್ಲಿ ನೀವು ಗೆಲುವಿನ ಉತ್ಸಾಹದಲ್ಲಿ ಮೊದಲಿನಂತೆ ಸೈನ್ಯದ ಕಡೆ ಗಮನ ನೀಡುತ್ತಿಲ್ಲ. ನಮ್ಮ ಸೇನಾಧಿಪತಿಗಳು, ಸೈನಿಕರು ಶಸ್ತ್ರಾಭ್ಯಾಸವನ್ನು ಕಡೆಗಣಿಸಿ, ಆಲಸ್ಯದಿಂದ ಲೋಲುಪತೆಯಲ್ಲಿ ಮುಳುಗಿದ್ದಾರೆ. ಹೊಸ ವಿಧದ ಶಸ್ತ್ರಗಳ ಆವಿಷ್ಕಾರಗಳು ನಡೆಯುತ್ತಿಲ್ಲ. ಈ ಕೂಡಲೆ ಸೈನ್ಯದ ಕಡೆ ಗಮನ ಹರಿಸಬೇಕು. ಇಲ್ಲದಿದ್ದರೆ ಯುದ್ದದಲ್ಲಿ ಗೆಲುವು ಕಷ್ಟವಾಗಬಹುದು... ಎಂದನು.

ಮಹಾರಾಜನ ಅಹಂಗೆ ಪೆಟ್ಟು ಬಿತ್ತು.

ಹೂಂ, ನಮ್ಮನ್ನು ಸೋಲಿಸುವವರು ಇನ್ನೂ ಹುಟ್ಟಿಲ್ಲ.... ನಮ್ಮ ಸಾಮರ್ಥ್ಯದ ಬಗ್ಗೆ ಉಡಾಫೆಯ ಮಾತನಾಡಲು ಎಷ್ಟು ಧೈರ್ಯ ನಿನಗೆ....ಇನ್ನೊಂದು ಸಲ ಇಂತಹ ಮಾತನಾಡಿದರೆ ಸೆರಮನೆಗೆ ತಳ್ಳಬೇಕಾದೀತು ಎಚ್ಚರ.... ಎಂದನು.

ಕೆಲವು ದಿನ ಕಳೆದವು. ರಾಮಚಂದ್ರನು ಊಹಿಸಿದಂತೆಯೇ ರುದ್ರದೇವನು ಕುಂತಲ ರಾಜ್ಯದ ಮೇಲೆ ದಾಳಿ ಮಾಡಿದನು. ಶಸ್ತ್ರಾಭ್ಯಾಸವನ್ನು ಕಡೆಗಣಿಸಿದ್ದ ಧ್ರುವಸೇನನ ಸೈನ್ಯ ಶತ್ರುಗಳ ಏಟಿಗೆ ತತ್ತರಿಸಲಾರಂಭಿಸಿತು. ಮೊದಲನೆಯ ದಿನದ ಯುದ್ಧದಲ್ಲಿ ಶತ್ರುಗಳ ಕೈ ಮೇಲಾಯಿತು. ಧ್ರುವಸೇನನು ಚಿಂತಿತನಾದನು. ರಾಮಚಂದ್ರನ ಮಾತನ್ನು ಕಡೆಗಣಿಸಿದ್ದಕ್ಕೆ ವ್ಯಥೆಪಟ್ಟನು.

ಆಗ ರಾಜನನ್ನು ಕಂಡ ರಾಮಚಂದ್ರನು ಮಹಾರಾಜರೆ, ಚಿಂತಿಸಬೇಡಿ. ಅಮರಪುರದ ಸಾಮಂತ ವಿಕ್ರಮ ಕುಮಾರನ ಸಂಸ್ಥಾನ ಚಿಕ್ಕದಾದರು ವಿಕ್ರಮರು ಶೂರರು, ವಿವೇಕವಂತರು ಹೌದು. ಅವರ ಸೈನ್ಯ ವೀರಾವೇಶಕ್ಕೆ ಹೆಸರುವಾಸಿಯಲ್ಲವೆ? ಕೂಡಲೇ ದೂತರನ್ನು ಕಳುಹಿಸಿ, ಯುದ್ಧಕ್ಕೆ ಸಹಾಯವನ್ನು ಕೋರಿ. ಅಲ್ಲದೆ, ಜಯಶೀಲರಾದ ಕೂಡಲೆ ರಾಜಕುಮಾರಿಯೊಂದಿಗೆ ಕಲ್ಯಾಣವನ್ನು ನಡೆಸುವುದಾಗಿ ಓಲೆಯನ್ನು ಕಳುಹಿಸಿ. ವಿಕ್ರಮಕುಮಾರನಿಗಿಂತ ವೀರ ಸದ್ಗುಣ ಸಂಪನ್ನ ನಮ್ಮ ರಾಜಕುಮಾರಿಗೆ ಸೂಕ್ತ ವರ ಸುತ್ತಮುತ್ತ ಯಾರಿದ್ದಾರೆ? ವಿಕ್ರಮನ ಸಹಾಯ ದೊರೆತರೆ ಗೆಲುವು ನಮ್ಮದಾಗುವುದು... ಎಂದನು.

ಧ್ರುವಸೇನನಿಗೆ ರಾಮಚಂದ್ರನ ಮಾತು ಸಂತೋಷವನ್ನು ತಂದಿತು. ದೂತರೊಂದಿಗೆ ಸಂದೇಶವನ್ನು ಕಳುಹಿಸಿದನು. ವಿಕ್ರಮನು ತನ್ನ ಸೈನ್ಯದೊಂದಿಗೆ ಬಂದನು. ಮರುದಿನ ಯುದ್ದ ಆರಂಭವಾದಾಗ ವಿಕ್ರಮನ ಸೈನ್ಯ ವೀರಾವೇಶದಿಂದ ಹೋರಾಡಿತು. ಅದನ್ನು ಕಂಡು ಧ್ರುವಸೇನನ ಸೈನಿಕರು ಉತ್ಸಾಹದಿಂದ ಯುದ್ದದಲ್ಲಿ ತೊಡಗಿದರು. ಶತ್ರುಗಳ ಸೈನ್ಯ ಸೋತು ಪಲಾಯನಗೈದಿತು.

ಧ್ರುವಸೇನನು ರಾಮಚಂದ್ರನ ದೂರದೃಷ್ಟಿಗೆ ಮೆಚ್ಚಿ, ತನ್ನ ಆಪ್ತ ಮಂತ್ರಿಯಾಗಿ ನೇಮಿಸಿಕೊಂಡನು. ರಾಜಕುಮಾರಿಯ ವಿವಾಹವನ್ನು ವಿಜೃಂಭಣೆಯಿಂದ ಮಾಡಿ ಸಂತಸಗೊಂಡನು. ■



ಮಂಜುನಾಥ ಹುಲಕೊಪ್ಪದ